

ಲಡಾಕ್ ನೋಡಬೇಕೆಂಬ ಉತ್ಕಟ ಬಯಕೆಯಿಂದ ಚಳಿಗಾಲದ ಅವಧಿಯಲ್ಲೇ ಇತ್ತೀಚೆಗೆ ಪ್ರವಾಸ ಹೋಗಿಬಂದೆವು. –25 ರಿಂದ –30 ಡಿಗ್ರಿವರೆಗಿನ ತಾಪಮಾನ, ಹಿಮಪಾತ, ಕಳೆದ ಐದು ವರ್ಷದಲ್ಲೆ ಅತ್ಯಂತ ಅಧಿಕ ಹಿಮ, ವಿಮಾನ ರದ್ದಾದರೆ ಏನು ಮಾಡುವುದು ಎಂಬ ಆತಂಕಗಳ ನಡುವೆಯೇ 'ಯಂಗ್ತ್ರಾಂಗ್' ಎಂಬ ಸ್ವರ್ಗ ಸದೃಶ ಹಳ್ಳಿಗೆ 20 ಕಿ.ಮೀ.ಗಳ ಚಾರಣ .

ಲೇಹ್–ಲಡಾಕ್ ವಾತಾವರಣಕ್ಕೆ, ಆಮ್ಲಜನಕದ ಕೊರತೆ, ಚಳಿಗಾಳಿಗೆ ಹೊಂದಿಕೊಳ್ಳಲು ಮೊದಲ ಒಂದೆರಡು ದಿನ ಜಾಸ್ತಿ ದೂರ ಹೋಗದೆ, ಆದಷ್ಟು ವಿರಾಮ ತೆಗೆದುಕೊಳ್ಳುವುದು ಮುಖ್ಯ. ನಾವು ಲೇಹ್ ತಲುಪಿದ ದಿನ ಹಿಮಪಾತ ಜೋರಾಗಿತ್ತು. ಇದು ಮರುದಿನ ಕೂಡ ಮುಂದುವರಿಯಿತು. ಹಾಗಾಗಿ ಇಡೀ ಲೇಹ್ ಪಟ್ಟಣ ದಪ್ಪ ಬಿಳಿ ಮುಸುಕು ಹೊದ್ದು ಮಲಗಿಬಿಟ್ಟಿತ್ತು. ದೇಶ ಕಾಯುವ ಸೈನಿಕರು ಬಿಟ್ಟರೆ ಇಲ್ಲಿನ ರಸ್ತೆಗಳಲ್ಲಿ ಜನ ಮತ್ತು ವಾಹನಗಳೇ ಇಲ್ಲ. ಮೊದಲೆರಡು ದಿನ ಲೇಹ್ ಸುತ್ತಮುತ್ತಲಿನ ಆಕರ್ಷಣೀಯ ಸ್ಥಳಗಳಿಗೆ, ಸ್ತೂಪಗಳಿಗೆ ಭೇಟಿಯ ನಂತರ ನಾವು ನಮ್ಮ ಪ್ರವಾಸದ ಮುಖ್ಯ ಆಕರ್ಷಣೆ ಯಂಗ್ತ್ರಾಂಗ್ ಹಳ್ಳಿಗೆ ಟ್ರೆಕ್ಕಿಂಗ್‌ಗೆ ಮಾನಸಿಕವಾಗಿ ತಯಾರಾಗಿದ್ದೆವು.

ಮುಂಚಿನ ದಿನ ರಾತ್ರಿ ಪ್ರವಾಸದ ಆಯೋಜಕರು ಭೇಟಿಯಾದರು. ಮೊದಲಿನ ಮುಖ್ಯ ದಾರಿ ಬಿಟ್ಟು ಕಣಿವೆ ಇಳಿಯುವಂತೆ ಗೈಡ್ ಸೂಚಿಸಿದ. ಅವನ ಹಿಂದೆಯೇ ಜಾಗ್ರತೆಯಿಂದ ಹೆಜ್ಜೆ ಹಾಕಿದೆವು. ಗುಡ್ಡ ಏರುತ್ತ, ಇಳಿಯುತ್ತ ಹಿಮಾವೃತ ದಾರಿಯಲ್ಲಿ ನಾವು 'ಸುಮದೊ' ಎಂಬ ಹಳ್ಳಿ ತಲುಪಿದೆವು. ಇದು ಹಳ್ಳಿ ಎಂದು ತಿಳಿದದ್ದು ಒಂದು ಫಲಕದಿಂದಾಗಿ. ಅದು ಬಿಟ್ಟರೆ ದೂರದಲ್ಲಿ ಒಂದೆರಡು ಮನೆಗಳು ಕಂಡವಷ್ಟೇ.

ಇಲ್ಲಿಂದ ಮುಂದಿನ ಹಾದಿ ಅತ್ಯಂತ ಕಠಿಣ. ಎರಡು ಗುಡ್ಡಗಳ ನಡುವೆ ಕಣಿವೆಯಲ್ಲಿ ಒಂದೆರಡು ಅಡಿಗಳಷ್ಟಿದ್ದ ದಪ್ಪ ಹಿಮದಲ್ಲಿ ನಾವು ನಡೆಯಬೇಕಾಗಿತ್ತು. ಇಷ್ಟು ಹೊತ್ತು ಹಿತಕರವಾಗಿದ್ದ ಮಧ್ಯಾಹ್ನದ ಬಿಸಿಲು ಗುಡ್ಡಗಳ ಮರೆಯಲ್ಲಿ ಸರಿದುಬಿಟ್ಟಿತ್ತು. ಚಳಿ ಮತ್ತಷ್ಟು ಹೆಚ್ಚಾಗಿತ್ತು. ಬಿಸಿಲಿನ ತಾಪವಿಲ್ಲದೆ ಹಿಮ ಗಟ್ಟಿಯಾಗಿದ್ದಾಗ ಮುನ್ನಡೆಯುವುದು ದೊಡ್ಡ ಸಾಹಸವೇ ಸರಿ. ಈ ದಾರಿಯಲ್ಲಿ ಬೇರೆ ಯಾರೂ ಇತ್ತೀಚೆಗೆ ನಡೆದುಹೋದ ಕುರುಹೇ ಇರಲಿಲ್ಲ. ಕೆಲವೊಂದು ಪ್ರಾಣಿಗಳ ಹೆಜ್ಜೆಗುರುತುಗಳಿದ್ದವು.



ಅಂತೂ ಗುಡ್ಡದ ಮಧ್ಯದ ರಸ್ತೆ ತಲುಪಿದೆವು. ಎಲ್ಲೆಲ್ಲೂ ಹಿಮ. ಇಲ್ಲಿ ದಾರಿಯಲ್ಲಿನ ಟ್ರೆಕ್ಕಿಂಗ್ ಸುಲಭದ್ದು, ಹೆಚ್ಚು ಶ್ರಮವಿಲ್ಲದ್ದು. ಹೋಗಿ ಬರಲು 15 ಕಿ.ಮೀ. ನಡೆದರಾಯಿತು ಅಷ್ಟೆ. ಆದರೆ ಆಯೋಜಕರ ಈಗಿನ ಮಾತುಗಳನ್ನು ಕೇಳಿ ನಮಗೆ ಅರೆಕ್ಷಣ ದಿಗಿಲಾಯಿತು. 'ಶ್ಯಾಮ್ ಕಣಿವೆಯ ದಾರಿ ಭಾರಿ ಹಿಮಪಾತದಿಂದ ಮುಚ್ಚಿ ಹೋಗಿದೆ, ಸ್ಥಳೀಯರು ನಡೆದು ಹೋಗಲು ಹಿಂದೇಟು ಹಾಕುತ್ತಿದ್ದಾರೆ. ವಾಹನ ಕೂಡ ಮುಖ್ಯ ರಸ್ತೆಯಿಂದ ಮುಂದೆ ಹೋಗುತ್ತಿಲ್ಲ. ಹಿಮ ಚಿರತೆಗಳ ವಾಸಸ್ಥಾನ ಬೇರೆ. ನಿಮಗೆ ಬೇರೆ ಯಾವುದಾದರೂ ವಾಹನ ಮೂಲಕ ಹೋಗುವ ಪ್ರವಾಸದ ವ್ಯವಸ್ಥೆ ಮಾಡುತ್ತೇನೆ ಆಗಬಹುದಾ?' ಎಂದಾಗ ನಮಗೆ ಆ ಚಳಿಯಲ್ಲಿ ಮುಖಕ್ಕೆ ತಣ್ಣೀರು ಎರಚಿದಂತಾಯಿತು. ಸ್ವಲ್ಪ ಹೊತ್ತಿನ ಚರ್ಚೆಯ ಬಳಿಕ ನಾವು ಅವರಲ್ಲಿ 'ಏನಾದರಾಗಲಿ, ಈ ಚಾರಣಕ್ಕೆ ನಾವು ಸಾಕಷ್ಟು ಸಮಯದಿಂದ ತಯಾರಿ ನಡೆಸಿದ್ದೇವೆ. ಟ್ರೆಕ್ಕಿಂಗ್ ಇಲ್ಲದೆ ಈ ಪ್ರವಾಸ ಅಪೂರ್ಣ. ನಾವು ಸಂಕಲ್ಪ ಮಾಡಿದ್ದೇವೆ. ನಮ್ಮ ಜೊತೆ ಒಳ್ಳೆಯ ಗೈಡ್ ಇದ್ದರಾಯಿತಷ್ಟೆ' ಎಂದು ವಿನಂತಿಸಿಕೊಂಡೆವು.